KATK010062942025

## <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ತುಮಕೂರು</u>

## <u>ವಿಶೇಷ ಮೊಕದ್ದಮೆ ಸಂಖ್ಯೆ 555/2025</u>

**ಫಿರ್ಯಾದಿ** : ರಾಜ್ಯದ ಪರವಾಗಿ ಶಿರಾ ಪೋಲೀಸ್

ವಿರುದ್ಧ

**ಆರೋಪಿತರು** : ಮುಸ್ತಫಾ ಖಾನ್ ಮತ್ತು ಇನ್ನೊಬ್ಬರು

### <u>ದೋಷಾರೋಪಣೆ</u>

**ಬಿ. ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್.** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಆದ ನಾನು ಆರೋಪಿತರಾದಃ

1. ಮುಸ್ತಫಾ ಖಾನ್
   ಬಿನ್ ಲೇಟ್ ಸತ್ತರ್ ಖಾನ್
   32 ವರ್ಷ, ಕೂಲಿ,
   ವಾಸ : ಪೇಷ್ಮ ಮೊಹಲ್ಲಾ, ಶಿರಾ ಟೌನ್,
   ತುಮಕೂರು ಜಿಲ್ಲೆ.

2. ಸೈಯದ್ ಅಫ್ಜಲ್ ಅಲಿಯಾಸ್ ಅಫ್ಜಲ್,
   ಬಿನ್ ಲೇಟ್ ಸೈಯದ್ ಹುಸೇನ್,
   42 ವರ್ಷ, ಕೂಲಿ,
   ವಾಸ : ಮೆಹಬೂಬ್ ನಗರ, ಶಿರಾ ಟೌನ್,
   ತುಮಕೂರು ಜಿಲ್ಲೆ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕ.22.06.2025 ರಂದು ರಾತ್ರಿ ಸುಮಾರು 8.50 ಗಂಟೆ ಸಮಯದಲ್ಲಿ ಶಿರಾ ಪೋಲೀಸ್ ಠಾಣಾ ಸರಹದ್ದು ಶಿರಾ ಟೌನ್ ಬಸ್ ಸ್ಟಾಂಡ್ ನಲ್ಲಿ ಹಿರಿಯೂರು-ತುಮಕೂರು ಹಳೇ ಎನ್.ಹೆಚ್.-4 ರಸ್ತೆಯ ಬದಿಯಲ್ಲಿರುವ ಸಾಕ್ಷಿ -3 ಪ್ರದೀಪ್ ಸಿಂಹ ರವರ ಬಿರಿಯಾನಿ ಸೆಂಟರ್ ಗೆ ಸಾಕ್ಷಿ-1 ರಘುರವರು ಹೋಗಿ ಎರಡು ಚಿಕನ್ ಬಿರಿಯಾನಿಗಳನ್ನು ಪಾರ್ಸೆಲ್ ಕಟ್ಟಿಸಿಕೊಂಡು, ಹಣ ಕೊಟ್ಟು, ಬಿರಿಯಾನಿ ಪ್ಯಾಕೇಟ್

ಗಳನ್ನು ಬಿರಿಯಾನಿ ಅಂಗಡಿಯಲ್ಲಿಟ್ಟು, ಪಕ್ಕದಲ್ಲಿರುವ ಸಾಕ್ಷಿ-4 ಅಹಮದ್ ರಜಾ ರವರ ಕಬಾಬ್ ಅಂಗಡಿಯಲ್ಲಿ ಕಬಾಬ್ ಕಟ್ಟಿಸಿಕೊಳ್ಳುವ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-3 ರವರ ಬಿರಿಯಾನಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಾಕ್ಷಿ-2 ನರಸಿಂಹಮೂರ್ತಿರವರ ಹತ್ತಿರ ಹೋಗಿ, ನೂರು ರೂಪಾಯಿ ಕೊಡು ಫೋನ್ ಪೇ ಮಾಡುತ್ತೇನೆಂದು ಕೇಳಿದಾಗ ಅದಕ್ಕೆ ಸಾಕ್ಷಿ-2 ರವರು ಹಣ ಇಲ್ಲ, ಬಿರಿಯಾನಿ ಕೊಂಡವರಿಗೆ ಮಾತ್ರ ಹಣ ಹಾಕಿಸಿಕೊಳ್ಳುತ್ತೇವೆಂದು ಹೇಳಿದಾಗ ಸಾಕ್ಷಿ-1 ರವರು ಆರೋಪಿತರಾದ ನಿಮಗೆ ನಾನು ಹಣ ಕೊಟ್ಟು ಬಿರಿಯಾನಿ ತೆಗೆದುಕೊಂಡಿದ್ದೇನೆ, ಫೋನ್ ಪೇ ಹಾಕಿಸಿಕೊಂಡು ಹಣ ಕೊಡುವುದಿಲ್ಲ, ಏಕೆ ಈ ರೀತಿ ಮಾಡುತ್ತೀರಾ ಎಂದು ಹೇಳಿದಾಗ ಆರೋಪಿತರಾದ ನೀವು ಸಾಕ್ಷಿ -1 ರವರಿಗೆ ತು ಕ್ಯಾ ಪೂಚ್ ನೇಕಾ, ಹಮಾರ ದುಖಾನ್, ಬಾತ್ ಕರ್ ನಕೋ, ಚುಪ್ ಕೇ ಜಾ, ತುಮ್ಹಾ ಬಾತಾ ಕರೇತೋ, ಕಾಡ್ ದಾಲ್ ತು ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದು, ಶಾಂತಿ ಭಂಗವನ್ನು ಉಂಟುಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿ ಅವಮಾನ ಮಾಡಿ, ಭಾರತೀಯ ನ್ಯಾಯ ಸಂಹಿತ 352 ಸಹವಾಚಕ ಕಲಂ 3(5) ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು, 1 ನೇ ಆರೋಪಿಯಾದ ನೀನು ಏಕಾಏಕಿ ಸಾಕ್ಷಿ-1 ರವರಿಗೆ ನಿನ್ನನ್ನು ಮುಗಿಸಿಬಿಡುತ್ತೀನಿ ಎಂದು ಕೊಲೆ ಮಾಡುವ ಉದ್ದೇಶದಿಂದ ನಿನ್ನ ಜೇಬಿನಲ್ಲಿಟ್ಟುಕೊಂಡಿದ್ದ ಹರಿತವಾದ ಕಬ್ಬಿಣದ ಚಾಕುವನ್ನು ತೆಗೆದುಕೊಂಡು ಸಾಕ್ಷಿ-1 ರವರ ರವರ ಹೊಟ್ಟೆಗೆ ಮತ್ತು ಎಡಕೈಗೆ ಚುಚ್ಚಿ ರಕ್ತಗಾಯವನ್ನುಂಟು ಮಾಡಿ, ಸದರಿ ಕೃತ್ಯದಿಂದ ಚಾ.ಸಾ.1 ರವರ ಸಾವು ಸಂಭವಿಸಬಹುದು ಎಂದು ತಿಳಿದಿದ್ದರೂ ಸಹಿತ ಅವರ ಕೊಲೆಗೆ ಪ್ರಯತ್ನಿಸಿ, ಭಾರತೀಯ ನ್ಯಾಯ ಸಂಹಿತ 109 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು, 2 ನೇ ಆರೋಪಿಯಾದ ನೀನು ಕೈಗಳಿಂದ ಸಾಕ್ಷಿ-1 ರವರನ್ನು ತಳ್ಳಿ ಕೆಳಕ್ಕೆ ನೂಕಿ, 1 ಮತ್ತು 2 ನೇ

ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಪ್ರಾಣ ಬೆದರಿಕೆ ಹಾಕಿ, ಭಾರತೀಯ ನ್ಯಾಯ ಸಂಹಿತ 351(2) ಸಹವಾಚಕ ಕಲಂ 3(5) ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 2 ನೇ ಆರೋಪಿಯಾದ ನೀನು ಗಾಂಜಾ ಸೇವನೆ ಮಾಡಿ, ಎನ್.ಡಿ.ಪಿ.ಎಸ್.ಕಾಯ್ದೆ ಕಲಂ 27(ಬಿ) ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ.28.01.2026 ರಂದು ಆದೇಶಿಸಿದ್ದೇನೆ.

ಸಹಿ/-

(ಬಿ. ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ತುಮಕೂರು</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ.555/2025</u>**

**ಫಿರ್ಯಾದಿ** : ರಾಜ್ಯದ ಪರವಾಗಿ ಶಿರಾ ಪೋಲೀಸ್

ವಿರುದ್ಧ

**1 ನೇಆರೋಪಿತ :** ಮುಸ್ತಫಾ ಖಾನ್
ಬಿನ್ ಲೇಟ್ ಸತ್ತರ್ ಖಾನ್
32 ವರ್ಷ, ಕೂಲಿ,
ವಾಸ : ಪೇಷ್ಮ ಮೊಹಲ್ಲಾ, ಶಿರಾ ಟೌನ್,
ತುಮಕೂರು ಜಿಲ್ಲೆ.

**<u>ಆರೋಪಿಯ ಹೇಳಿಕೆ</u>**

1. ಈಗ ನಿಮಗೆ ಓದಿ ವಿವರಿಸಿ ಹೇಳಿದ ಆಪಾದನೆಗಳ ವಿವರಗಳು ತಿಳಿಯಿತಲ್ಲವೇ?

ಉತ್ತರಃ

2. ಸದರಿ ಆಪಾದನೆಗಳಿಗೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬಯಸುವಿರೋ?

ಉತ್ತರಃ

(ಸದರಿ ಆರೋಪಿಗೆ ಅವರ ವಿರುದ್ಧ ಆಪಾದನೆಗಳು ಅವರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದೇನೆ. ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ.)

ದಿನಾಂಕ: 28.01.2026.

(ಬಿ. ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ತುಮಕೂರು</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ.555/2025</u>**

**ಫಿರ್ಯಾದಿ** : ರಾಜ್ಯದ ಪರವಾಗಿ ಶಿರಾ ಪೋಲೀಸ್

ವಿರುದ್ಧ

**2 ನೇಆರೋಪಿತ :** ಸೈಯದ್ ಅಫ್ಜಲ್ ಅಲಿಯಾಸ್ ಅಫ್ಜಲ್,
ಬಿನ್ ಲೇಟ್ ಸೈಯದ್ ಹುಸೇನ್,
42 ವರ್ಷ, ಕೂಲಿ,
ವಾಸ ಃ ಮೆಹಬೂಬ್ ನಗರ, ಶಿರಾ ಟೌನ್,
ತುಮಕೂರು ಜಿಲ್ಲೆ.

**<u>ಆರೋಪಿಯ ಹೇಳಿಕೆ</u>**

1. ಈಗ ನಿಮಗೆ ಓದಿ ವಿವರಿಸಿ ಹೇಳಿದ ಆಪಾದನೆಗಳ ವಿವರಗಳು ತಿಳಿಯಿತಲ್ಲವೇ?

ಉತ್ತರಃ

2. ಸದರಿ ಆಪಾದನೆಗಳಿಗೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬಯಸುವಿರೋ?

ಉತ್ತರಃ

(ಸದರಿ ಆರೋಪಿಗೆ ಅವರ ವಿರುದ್ಧ ಆಪಾದನೆಗಳು ಅವರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದೇನೆ. ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ.)

ದಿನಾಂಕ:28.01.2026

(ಬಿ. ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.